# ಪ್ರಾರ್ಥನೆ

## ಶ್ರೀಗುರು ಸ್ತುತಿ



(ರಾಗ – ಧನ್ಯಾಸಿ, ತಾಳ – ಚಾಪು )

**ನೀ ಚಿತ್ತಮು ನಿಶ್ಚಲಮು ನಿರ್ಮಲಮನಿ**
**ನಿನ್ನೇ ನಮ್ಮಿ ನಾನು ॥ ಪಲ್ಲವಿ ॥**

**ನಾ ಚಿತ್ತಮು ವಂಚಕ ಚಂಚಲಮನಿ**
**ನನು ವಿಡನಾಡಕುಮಿ ಶ್ರೀರಾಮ ॥ ಅನುಪಲ್ಲವಿ ॥**

**ಗುರುವು ಚಿಲ್ಲಗಿಂಜ ಗುರುವೇ ಭ್ರಮರಮು**
**ಗುರುಡೇ ಭಾಸ್ಕರುಡು**
**ಗುರುಡೇ ಭದ್ರುಡಗು ಗುರುವು ನೀ ವನುಕೊಂಟಿ**
**ಧರನು ದಾಸುನಿ ಬ್ರೋವು ತ್ಯಾಗರಾಜನುತ ॥**

— ತ್ಯಾಗರಾಜ

ಶ್ರೀರಾಮ! ನಿನ್ನ ಮನಸ್ಸು ನಿರ್ಮಲವೂ ನಿಶ್ಚಲವೂ ಆಗಿದೆ. ಆದ್ದರಿಂದ ನಾನು ನಿನ್ನನ್ನೇ ನಂಬಿದ್ದೇನೆ. ನನ್ನ ಚಿತ್ತವು ಚಂಚಲವಾಗಿದೆಯೆಂದು ನನ್ನ ಕೈಬಿಡಬೇಡ. ಕಟಕದ ಬೀಜದಂತೆ ಗುರುವು ಚಿತ್ತವನ್ನು ನಿರ್ಮಲಗೊಳಿಸುತ್ತಾನೆ. ಅವನೇ ಭ್ರಮರ. ಶಿಷ್ಯನನ್ನು ತನ್ನಂತೆ ಪರಿವರ್ತಿಸುತ್ತಾನೆ. ಸೂರ್ಯನಂತೆ ಅಜ್ಞಾನದ ಮಂಜನ್ನು ಹೋಗಲಾಡಿಸುತ್ತಾನೆ. ಅವನೇ ಮಂಗಳಕರನಾದ ಮೂರ್ತಿ; ಅವನೇ ಉತ್ತಮವಾದ ಗತಿಯನ್ನು ಕೊಡುವವನು. ಈ ಲೋಕದಲ್ಲಿ ಶಿಷ್ಯನಾದ ನನ್ನನ್ನು ಕಾಪಾಡುವ ಗುರುವು ನೀನೇ ಆಗಿದ್ದೀಯೆ.

# ಸೂಕ್ತಿಪ್ರಭ

**ಉ**ನ್ನತ ಸಾಧನೆಗಳನ್ನು ಮಾಡುವವನು, ಮೊದಲಿಗೆ ತಾನೇನು ಮಾಡಬಯಸುತ್ತಾನೆ ಎಂಬುದನ್ನು ತನ್ನ ಮನಸ್ಸಿನಲ್ಲಿ ಕಾಣುತ್ತಾನೆ. ಬಳಿಕ ಅವನು ತನ್ನ ಎಲ್ಲ ಸಂದೇಹಗಳನ್ನೂ ದೂರ ಮಾಡುತ್ತಾನೆ. ತಾನು ಮಾಡಬೇಕಾದ ಕಾರ್ಯ ಎಷ್ಟೇ ಚಿಕ್ಕದಿರಲಿ ಅಥವಾ ದೊಡ್ಡದಿರಲಿ, ಅದರಲ್ಲೇನೂ ವ್ಯತ್ಯಾಸವಿಲ್ಲ; ಅವನಿಗೆ ತನ್ನ ಸಾಮರ್ಥ್ಯದಲ್ಲಿ ಅಸೀಮ ನಂಬಿಕೆಯಿದ್ದರೆ ಸಾಕು, ಅವನು ಅದನ್ನು ಮಾಡಿಯೇ ತೀರುವನು.

— ಚಾರ್ಲ್ಸ್ ಫಿಲ್‌ಮೋರ್

**ಇ**ತರರು ಆನಂದವಾಗಿರಬೇಕು ಎಂದು ನೀನು ಬಯಸುವುದಿದ್ದರೆ, ಅನುಕಂಪವನ್ನು ಅಭ್ಯಾಸ ಮಾಡು. ನೀನು ಆನಂದವಾಗಿರಬೇಕು ಎಂದು ಬಯಸುವುದಿದ್ದರೆ, ಅನುಕಂಪವನ್ನು ಅಭ್ಯಾಸ ಮಾಡು.

— ದಲೈ ಲಾಮಾ

**ಆ**ಶಾಭಾವದಷ್ಟು ಉತ್ತಮವಾದ ಔಷಧಿ ಬೇರೊಂದಿಲ್ಲ; ಅದರಷ್ಟು ಪ್ರೋತ್ಸಾಹಕವಾದುದು ಇನ್ನೊಂದಿಲ್ಲ. ನಾಳೆ ಇನ್ನೂ ಉತ್ತಮವಾಗುವುದು ಎಂಬ ನಿರೀಕ್ಷೆಯಷ್ಟು ಶಕ್ತಿಶಾಲಿಯಾದ ಕಷಾಯ ಇನ್ನೊಂದಿಲ್ಲ.

— ಆರಿಸನ್ ಸ್ವೆಟ್ ಮಾರ್ಡೆನ್

**ಜೀ**ವವು ಕುಡಿಯೊಡೆದು, ಬಳಿಕ ಬೆಳೆದು, ಅನಂತರ ಅದು ವಿಕಸನ ಹೊಂದುವಂತೆ ಮಾಡುವುದೇ ಅಧ್ಯಾಪಕನಾದವನ ಮೊದಲ ಕಾರ್ಯ.

— ಮಾರಿಯಾ ಮಾಂಟೆಸ್ಸರಿ

**ಕ**ಣ್ಣಿಲ್ಲದವನಿಗೆ ಕನ್ನಡಿ ಹೇಗೆ ನಿಷ್ಪ್ರಯೋಜಕವೋ ಹಾಗೆ, ಸ್ವಯಂಪ್ರಜ್ಞೆ ಇಲ್ಲದವನಿಗೆ ಶಾಸ್ತ್ರ ನಿಷ್ಪ್ರಯೋಜಕ.

— ಸುಭಾಷಿತ